









ಮಾಡ್ತೇವೆ. ಡಿಮ್ಯಾಂಡ್ ಭಾರೀ ಇದೆ, ಆದರೆ ಕಬ್ಬಿನ ಪೂರೈಕೆ ಕಡಿಮೆಯಾಗಿರೋದ್ರಿಂದ ಕೇಳಿದಷ್ಟು ಬೆಲ್ಲ ಕೊಡೋಕಾಗ್ತಿಲ್ಲ, ಒಂದು ಪರಂಪರೆ ಅಂತ ಈ ಆಲೆಮನೆ ಬಿಡೋಕಾಗ್ತಿಲ್ಲ, ಮುಂದೆ ಕಬ್ಬು ಬರೋದೇ ಕಡಿಮೆಯಾದರೆ ಅನಿವಾರ್ಯವಾಗಿ ಬೆಲ್ಲ ತಯಾರಿಸೋದು ನಿಲ್ಲಿಸ್ತೇವಷ್ಟೆ. ಆಲೆಮನೆ ನಿರ್ವಹಿಸೋದೂ ಕಷ್ಟವಾಗ್ತದೆ' ಎಂದು ಆಲೆಮನೆಯ ಮುಖ್ಯಸ್ಥ ಸಚಿನ್ ಹೇಳುವಾಗ ಕಬ್ಬಿನ ಹಾಲು ದೊಡ್ಡ ಬಾಣಲೆಯಲ್ಲಿ ಬೆಲ್ಲವಾಗಲು ತವಕಿಸುತ್ತ ಇಳಿಯುತ್ತಿತ್ತು. ಮೊದಲು ಸಿದ್ಧವಾದ ಬೆಲ್ಲವನ್ನು ಡಬ್ಬದಲ್ಲಿ ತುಂಬಿಸುವ ಕೆಲಸ ಅದಾಗಲೇ ಮುಗಿದು, ಸಾಲು ಸಾಲು ಡಬ್ಬಗಳೆಲ್ಲ ಮೊದಲೇ ಬೆಲ್ಲಕ್ಕಾಗಿ ಆರ್ಡರ್ ಕೊಟ್ಟವರ ನಾಲಗೆಯಲ್ಲಿಳಿಯಲು ಕಾಯುತ್ತಿತ್ತು.

ಹಿಂದೆಲ್ಲಾ ಆಲೆಮನೆಯೆಂದರೆ ಊರಿಗೆಲ್ಲಾ ಜಾತ್ರೆಯ ಹಾಗೆ ಹಿಗ್ಗು, ಸಾಂಪ್ರದಾಯಿಕ ಆಲೆಮನೆಯಿಂದ ಮಲೆನಾಡು ಸಂಪೂರ್ಣವಾಗಿ ಆಧುನಿಕ ಆಲೆಮನೆಗೆ ತೆರೆದುಕೊಂಡಿದ್ದರೂ ಊರಿನ ಒಂದಷ್ಟು ಹೊಸ ಚಿಗುರಿನಂತಹ ಯುವಕರು ಅಪ್ಪ, ಅಜ್ಜ, ದೊಡ್ಡಪ್ಪ ಮೊದಲಾದ ಹಳೆ ಬೇರುಗಳ ಸಲಹೆಯ ನೆರಳಿನಲ್ಲಿ ದೇಶಿ ಆಲೆಮನೆಯ ಸಂಭ್ರಮವನ್ನೂ, ಕೌತುಕವನ್ನೂ ಈ ಕಾಲದ ಮಂದಿಗಳಲ್ಲಿ ಬೆಲ್ಲದಷ್ಟೇ ಹದವಾಗಿ ಇಳಿಸುತ್ತಿದ್ದಾರೆ. ಅವರ ಬೆಲ್ಲದ ಬದುಕು ಹಸನಾಗಲಿ, ಪ್ರತೀ ವರುಷವೂ ಆಲೆಮನೆಯ ಸಿಹಿಯ ಗಂಧ ಮಲೆನಾಡಿನಲ್ಲಿ ಹೊಮ್ಮಲಿ, ಕಬ್ಬಿನ ಹಾಲು ಚಿಮ್ಮಲಿ, ಬೆಲ್ಲ ಬೆಟ್ಟವಾಗಲಿ ಎಂದು ಬೆಲ್ಲದಷ್ಟೇ ಸಿಹಿಯಾಗಿ ಹಾರೈಸಿ ಆಲೆಮನೆಯಿಂದ ಸ್ವಲ್ಪ ದೂರ ಬಂದೆವು. ಆಗ ಗಾಳಿ ಬೆಲ್ಲದ ನೆನಪನ್ನೇ ಉಸಿರಾಡುವಂತೆ ಬೆಲ್ಲದ ಕಂಪಿನಿಂದ ಒಮ್ಮೆ ಮೋಹಕವಾಗಿ ಬೀಸಿತು.

ಪ್ರತಿಕ್ರಿಯಿಸಿ: **feedback@sudha.co.in**